


# ಜೀವನದ ಸಾರ ಅಡಕವಾಗಿದೆ ಇಲ್ಲಿ...

'ನಾಯಿ ತಲಿಮ್ಯಾಲಿನ ಬುತ್ತಿ ಸಂಸಾರ
ಬಲು ದುಸ್ತಾರ ಇದನರಿತು ಅರಿತು
ಮಂದಿ ಬಿದ್ದಾರ, ಹಿಂದ ಬಿದ್ದಾರ...'

ಎಚ್.ಎಸ್. ವೆಂಕಟೇಶಮೂರ್ತಿಯವರು ಬರೆದು ಸಿ. ಅಶ್ವಥ್ ಅವರು ಸುಮಧುರ ಕಂಠಸಿರಿಯಲ್ಲಿ ಹಾಡಿರುವ ಈ ಭಾವಗೀತೆಯನ್ನು ಕೇಳುವಾಗ ನನ್ನ ಜೀವನದಲ್ಲಿ ನಡೆದಿರುವ ಕೆಲವೊಂದು ಕಹಿ ಘಟನೆಗಳು ನೆನಪಿಗೆ ಬರುತ್ತವೆ. 'ಕೈ ನಡೆಯೋ ಕಾಲ, ಕೈಗೊಬ್ಬ ಕಾಲ್ಗೊಬ್ಬ... ಕೈಸೋತ ಕಾಲಕ್ಕೆ ಬಿಡ್ತಾರೊ ಕೈಯ್ಯ ಬಿಡ್ತಾರೋ...' ಈ ಸಾಲು ಅಕ್ಷರಶಃ ಸತ್ಯ. ನಮ್ಮ ಕಷ್ಟ ಕಾಲದಲ್ಲಿ ನಮ್ಮವರೆಂದು ತಿಳಿದವರ ಬಳಿ ಅಪ್ಪಿತಪ್ಪಿ ಕಷ್ಟವನ್ನು ಹೇಳಿಕೊಂಡರೆ ಅವರು ನಮ್ಮಿಂದ ದೂರವೇ ಉಳಿದು ಬಿಡುತ್ತಾರೆ. ಅಂತಹವರು ನಮಗೆ ಜೀವನದ ಪಾಠವನ್ನು ಕಲಿಸಿ ಬಹು ದೂರ ಹೊರಟು ಹೋಗುತ್ತಾರೆ. ಅದುವರೆಗೂ ಯಾರನ್ನು ನಮ್ಮವರೆಂದುಕೊಂಡಿರುತ್ತೇವೆಯೋ ಅವರೊಂದಿಗೆ ಮಾನ, ಅವಮಾನಗಳನ್ನು ಸಹಿಸುತ್ತಾ ಬದುಕಿನ ಬಂಡಿಯನ್ನು ಎಳೆಯುತ್ತಿರುತ್ತೇವೆ. ಈ ಯಾಂತ್ರಿಕ ಬದುಕಿನಲ್ಲಿ 'ತೊರೆ ತುಂಬಿ ಹರಿವಾಗ ದೋಣಿಕಾರ ದೇವರು, ಹೊಳೆಯ ದಾಟಿದ ಮ್ಯಾಲೆ ಅವನ್ಯಾರೋ ತಮ್ಮ ಇವನ್ಯಾರೋ' ಎನ್ನುವಂತಾಗಿದೆ.

ಭಾವಗೀತೆಗಳನ್ನು ಅಡುಗೆ ಮಾಡುತ್ತಾ, ವಾಕಿಂಗ್ ಹೋಗುತ್ತಾ ಕೇಳುತ್ತಿರುತ್ತೇನೆ. ಎಂಥದೇ ನೋವು, ಕೋಪ ಇದ್ದರೂ ಭಾವಗೀತೆಗಳನ್ನು ಕೇಳುವಾಗ ನನ್ನ ಮನಸ್ಸು ಶಾಂತಗೊಳ್ಳುತ್ತದೆ.

'ಜೀವ ಇರೋ ತನಕ ಮಾನ ಅವಮಾನ
ಸತ್ತ ಮೇಲೆ ಎತ್ತಿ ಹೊಗಿತ್ತಾರೊ
ತಮ್ಮ ಉಗಿತಾರೋ' ಈ ಹಾಡಿನಲ್ಲಿ ನಿಜ ಜೀವನದ ವಾಸ್ತವ ಸಂಗತಿಗಳಿವೆ.

—ವೇದಾವತಿ ಹೆಚ್.ಎಸ್.

# ನೊಂದ ಮನಕ್ಕೆ ಸಾಂತ್ವನದ ಸಾಲು

ಕರೆಯಬೇಡ ಸುಖಿ ಎಂದು ಯಾರನ್ನು ನೀನು...

ಬಿ.ಆರ್. ಲಕ್ಷ್ಮಣರಾವ್ ಅವರ ಈ ಭಾವಗೀತೆಯ ಸಾಲು ಕಂಗೆಟ್ಟ ಪ್ರತಿಯೊಬ್ಬರಲ್ಲೂ ಹೊಸ ಜೀವಚೈತನ್ಯ ತುಂಬಬಲ್ಲುದು. ಸಂಸಾರದ ಬಂಡಿ ಕೀಲು ತಪ್ಪಿ ಸೋತಾಗ ಅಪ್ಪನ ಸಂಸಾರದ ಬಂಡಿಯ ನೊಗಕ್ಕೆ ನಾನು ಹೆಗಲಾದ ಆ ದಿನಗಳು ಈಗಲೂ ನೆನಪಿನಾಳದಲ್ಲಿ ಅಚ್ಚಳಿಯದಂತಿವೆ.

ಉಂಡಾಡುವ ವಯಸ್ಸಲ್ಲಿ ಅರ್ಧಕ್ಕೆ ಓದು ನಿಲ್ಲಿಸಿ ದುಡಿಮೆಯ ಬೆನ್ನಟ್ಟಿ ಇಷ್ಟಿಷ್ಟೇ ಹನಿಹನಿಯಾಗಿ ತಾಸಿಗೆ ತಾಸು ದುಡಿದು ಕಾಸಿಗೆ ಕಾಸು ಕೂಡಿಟ್ಟು ಹೆತ್ತವರ ತಮ್ಮ ತಂಗಿಯ ಹೊಟ್ಟೆ ನೆತ್ತಿ ನೋಡಿದ ಆ ಕಷ್ಟದ ದಿನಗಳಿಗಿಂತ ಇಂದು ಪರವಾಗಿಲ್ಲ ಅನ್ನೋ 'ಪದ'ವಿಯಲ್ಲಿರುವಾಗಲೇ ಮತ್ತೆ ಮತ್ತೆ ಬಂದೆರಗುವ ಕಷ್ಟಗಳಿಗೆ ಸೋತು ಸಾಕಿನ್ನು ಅಂತ ಕೈ ಚೆಲ್ಲಿದಾಗ ಈ ಕವಿತೆಯ ಸಾಲು ನನ್ನೊಳಗೆ ಹೊಸದೊಂದು ಚೈತನ್ಯ ಮೂಡಿಸುತ್ತದೆ.
ಈ ಜಗತ್ತಲ್ಲಿ ಯಾರೂ ಸುಖವಾಗಿಲ್ಲ! ಸುಖ ಶಾಶ್ವತವಲ್ಲ ಅನ್ನೋ ಸತ್ಯ ನನ್ನನ್ನು ಮತ್ತೆ ಮತ್ತೆ ಎಚ್ಚರಿಸುತ್ತೆ.

ಸೆಟೆದು ನಿಂತ ತೆಂಗಿನ ಮರ,
ಲಟಕ್ಕೆಂದು ಉರುಳಬಹುದು, ಸಿಡಿಲು ಬಡಿದರೆ,
ಕರೆಯಬೇಡ ಸುಖಿ ಎಂದು ಯಾರನ್ನು ನೀನು,
ಅವ ತೀರುವ ತನಕ,
ಯಾವ ಕ್ಷಣ ಹೇಗೋ ಯಾರು ಬಲ್ಲರು
ಎದುರಾಗುವ ತನಕ...

ಬದುಕಲ್ಲಿ ಯಾವ ಸುಖವೂ ಶಾಶ್ವತವಲ್ಲ ಸುಖದ ಹಿಂದೆ ದುಃಖ ದುಃಖದ ಹಿಂದೆ ಸುಖ... ಕಾಲಚಕ್ರದಂತೆ ತಿರುಗುವ ಈ ಬದುಕಲ್ಲಿ ಯಾರನ್ನೂ ಸುಖಿ ಎಂದು ಕರೆಯಬೇಡ ಅನ್ನೋ ಈ ಸಾಲುಗಳು ನೊಂದವರಿಗೆ ಸದಾ ಆಪ್ತವಾಗುತ್ತವೆ.

—ಸಿದ್ದರಾಮ ತಳವಾರ, ದಾಸ್ತಿಕೊಪ್ಪ

# ಅವರವರ ದಾರಿಯಲ್ಲಿ...

ಹೂವು ಹೊರಳುವವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರನವರೆಗೆ...

'ಸಮನ್ವಯ ಕವಿ' ಎಂದೇ ಖ್ಯಾತರಾಗಿರುವ ನಾಡೋಜ ಚನ್ನವೀರ ಕಣವಿಯವರ ಕವಿತೆಯ ಈ ಸಾಲುಗಳು ಬಹಳ ಸೊಗಸಾಗಿವೆ.

ಎಲ್ಲವನ್ನೂ ಎಲ್ಲರೂ ಎದುರಿಸಲಾರರು, ಹಾಗೆಯೇ ಪಡೆದುಕೊಳ್ಳಲಾರರು. ಪ್ರತಿಯೊಬ್ಬರ ಗುಣ, ಸ್ವಭಾವ, ಸಾಮರ್ಥ್ಯ, ಸಿಗುವ ಅವಕಾಶಗಳು ಮತ್ತು ಅದೃಷ್ಟ ಎಲ್ಲವೂ ವಿಭಿನ್ನ. ನಮ್ಮ ನಮ್ಮ ದಾರಿಯಲ್ಲಿ ನಡೆಯುತ್ತ ನಮ್ಮ ಬೊಗಸೆಯ ಗಾತ್ರಕ್ಕೆ ತಕ್ಕಂತೆ ಕರ್ಮಫಲ, ಯಶಸ್ಸು ದೊರೆತರೂ ಅವುಗಳಲ್ಲಿ ಕೈ ಬೆರಳುಗಳ ನಡುವೆ ಜಾರದೆ ಎಷ್ಟು ಉಳಿಯುತ್ತದೋ ಅದಷ್ಟೇ ನಮ್ಮದು ಎನಿಸುತ್ತದೆ. ಸಿಕ್ಕಿದ್ದೆಲ್ಲವೂ ಎಂದಿಗೂ ದಕ್ಕಲಾರವು ಎಂಬ ಮಾತು ಮತ್ತೆ ನೆನಪಾಗುವುದು.

ಮೇಲಿನ ಕವಿವಾಣಿ ಸೂರ್ಯನಿಗೂ ಚಂದ್ರನಿಗೂ ಹೋಲಿಸಲಾಗದು ಎಂದು ತಿಳಿಸಿಕೊಡುತ್ತದೆ. ಹಾಗೆಯೇ ಇತರರೊಂದಿಗೆ ನಮ್ಮನ್ನು ಹೋಲಿಕೆ ಮಾಡುತ್ತಾ ಬದುಕಲಾಗದು. ಅವರವರ ದಾರಿಯಲಿ ನಡೆಯುತ್ತಿರಬೇಕು ಅಷ್ಟೇ. ಬಹುಶಃ ಇದು ಪ್ರಕೃತಿ ಕಲಿಸುವ ಪಾಠವೆನಿಸುತ್ತದೆ. ನಮ್ಮ ನಮ್ಮ ಬದುಕಿಗೆ ಒಂದು ಇತಿಮಿತಿ ಇರಬೇಕೆಂದು ಈ ಕವಿವಾಣಿ ತಿಳಿಸುತ್ತದೆ. ನಮ್ಮ ಆಸೆ, ಆಕಾಂಕ್ಷೆ ಮತ್ತು ಕನಸುಗಳಿಗೆ ಒಂದು ಅಗೋಚರ ಲಕ್ಷ್ಮಣರೇಖೆಯನ್ನು ನಾವೇ ಎಳೆದು ಬಾಳಬೇಕು. ನಮ್ಮ ಶಕ್ತಿ ಮತ್ತು ಸಾಮರ್ಥ್ಯಗಳಿಗೆ ಅನುಸಾರವಾಗಿ ನಮ್ಮ ಬಾಳದಾರಿಯಲ್ಲಿ ನಡೆದು ದೊರಕಿದ್ದಕ್ಕೆ ತೃಪ್ತಗೊಳ್ಳಬೇಕು. ಈ ಸಾಲು ಜೀವನ ಪಾಠವನ್ನು ಹೇಳಿಕೊಟ್ಟಿದೆ.

– ಶಾಂತಲಾ ರಾಜಗೋಪಾಲ್

## ಹೇಳದೇ ಉಳಿದ ಮಾತು



ಎಷ್ಟೋ ಬಾರಿ ನಮಗೆ ಈ ಸಂದಿಗ್ಧ ಎದುರಾಗುತ್ತದೆ. ಹಿರಿಯರ ಬಳಿಯೋ, ಪ್ರೀತಿಪಾತ್ರರ ಬಳಿಯೋ, ಗುರುಗಳ ಬಳಿಯೋ ನಮ್ಮ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳಬೇಕು, ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು ಅಂದುಕೊಳ್ಳುತ್ತೇವೆ. ನಮ್ಮ ಕನಸು, ಭಾವನೆ, ಆಲೋಚನೆ, ಚಿಂತನೆ, ಆಶಯ, ಅಭಿಪ್ರಾಯ, ಅನಿಸಿಕೆ ಹೇಳಲು ಸಾಧ್ಯವಾಗದೇ ಇರುವ ಸಂದರ್ಭ ಬಂದುಬಿಡುತ್ತದೆ. ಹೇಳಬೇಕು, ಹಂಚಿಕೊಳ್ಳಬೇಕು ಅನಿಸುವಷ್ಟರಲ್ಲಿ ಆ ವ್ಯಕ್ತಿ, ಪ್ರೀತಿಪಾತ್ರರು, ಹಿರಿಯರು ಇಲ್ಲವಾಗುತ್ತಾರೆ. ಆಗ ಆ ಭಾವನೆ ಮನಸ್ಸಲ್ಲೇ ಉಳಿದು ಹಪಹಪಿಸುವಂತಾಗುತ್ತದೆ. ಇಂತಹ ಸನ್ನಿವೇಶ ಅನೇಕರ ಬದುಕಿನಲ್ಲಿ ನಡೆದಿರಬಹುದಲ್ಲವೇ? ಹೇಳದೇ ಉಳಿದ ನಿಮ್ಮ ಮನದಾಳದ ಆ ಮಾತನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಡಿಸೆಂಬರ್ 25. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಇ–ಮೇಲ್ ಮಾಡಿ.